SRI PRABHAKAR TELKAR.—Sir, the condition of the roads on the border has become worse though they have been repaired as specified by the Indian Road Congress. If you just pass through, in a car on the borders of Tamil Nadu, Uttara Pradesh etc., you will immediately say that the roads are of Karnataka. The roads have become so worse, near our borders. Will the Government take action to see that they are made pucca roads and they are maintained as per the requisite specifications?

ಶ್ರೀ ಕಾಗೋಡು ತಿಮ್ಮಪ್ಪ.—ಬಾರ್ಡರ್‌ಗಳು ತೀರ ಕೆಟ್ಟಿದೆ ಎನ್ನುವುದು ನಮ್ಮ ಗಮನಕ್ಕೂ ಬಂದಿದೆ. ಈಮತ್ತಿನ ದಿವಸ ತಮಿಳುನಾಡು, ಆಂಧ್ರ, ಮಹಾರಾಷ್ಟ್ರಕ್ಕೆ ಸೇರಿದಂತೆ ನಮ್ಮ ರಾಜ್ಯದ ಬಾರ್ಡರ್‌ನಲ್ಲಿ ಬರತಕ್ಕಂಥ ರಸ್ತೆಗಳು ತೀರಾ ಕೆಟ್ಟಿದೆ. ಅಂಥ ರಸ್ತೆಗಳನ್ನು ದುರಸ್ತಿಮಾಡಲು ಕೇಂದ್ರ ಸರ್ಕಾರದ ಲೋನ್ ಅಸಿಸ್ಟೆನ್ಸ್ ಇದೆ. ಅದರ ಪ್ರಕಾರ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ. ನಾವೂ ಕೂಡ ಮಾಡಬೇಕಾಗುತ್ತದೆ. ಈಗ ನಾವು ನೆರವನ್ನು ನಿರೀಕ್ಷೆ ಮಾಡುತ್ತಿದ್ದೇವೆ. ನೆರವು ಬಂದ ತಕ್ಷಣವೇ ರಸ್ತೆಗಳ ರಿಪೇರಿ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀ ಜಿ. ರಾಮೇಗೌಡ.—ರಸ್ತೆಗಳ ನಿರ್ಮಾಣವಾಗಿ ೧೨ ವರ್ಷಗಳಾಗಿರುತ್ತವೆ. ಇಷ್ಟು ವರ್ಷಗಳಾದರೂ ಕೂಡ ರಸ್ತೆಗಳನ್ನು ಪುನ: ರಿಪೇರಿ ಮಾಡತಕ್ಕಂಥ ಕಾರ್ಯ ಕೈಗೊಳ್ಳದಿರುವುದು ತಮ್ಮ ಗಮನಕ್ಕೆ ಬಂದಿರುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಯಾವುದು ಎನ್ನುವುದನ್ನು ಹೇಳಿದರೆ ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಜಿ. ರಾಮೇಗೌಡ.—ದೊಡ್ಡಬಳ್ಳಾಪುರದ ತಾಲ್ಲೂಕ್‌ನಿಂದ ೧೬ ಮೈಲಿ ದೂರದಲ್ಲಿರುವ ದೊಡ್ಡಬೆಳವಂಗಲದಿಂದ ಆರುಡಿಪರೆಗೆ ಸರ್ಕಾರದವರು ನಿರ್ಮಾಣ ಮಾಡಿರತಕ್ಕಂಥ ರಸ್ತೆ, ಶ್ರೀಮಾನ್ ವಿರೇಂದ್ರಪಾಟೀಲ್‌ರವರು ಮುಖ್ಯ ಮಂತ್ರಿಯಾಗಿದ್ದಾಗ ತೆಗೆದುಕೊಂಡಂಥ ರಸ್ತೆ ತೀರ ಕೆಟ್ಟಿದೆ. ಇದುವರೆಗೂ ರಿಪೇರಿ ಕಾರ್ಯ ಮಾಡಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ರಸ್ತೆ ತೀರ ಕೆಟ್ಟಿದ್ದರೆ ಅದನ್ನು ವ್ಯವಸ್ಥೆ ಮಾಡಿಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿ.—ರಾಜ್ಯದ ಬೆಂಗಳೂರಿಗೆ ಎಲ್ಲಾ ಜಿಲ್ಲೆಗಳಿಂದಲೂ ಬರತಕ್ಕಂಥ ಜನರು ಜಾಸ್ತಿಯಾಗಿರುವುದರಿಂದ intensity of traffic ಜಾಸ್ತಿಯಾಗಿರುತ್ತದೆ. ಆದ್ದರಿಂದ ರಸ್ತೆಗಳ ನಿರ್ವಹಣೆಯ ವೆಚ್ಚವೂ ಕೂಡ ಜಾಸ್ತಿಯಾಗಬೇಕಾಗಿರುತ್ತದೆ. ಆದ್ದರಿಂದ ಹೆಚ್ಚಿಗೆ ಹಣವನ್ನು ಒದಗಿಸುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಬೆಂಗಳೂರು ನಗರಕ್ಕೆ ಬೇರೆ ಬೇರೆ ಜಿಲ್ಲೆಗಳಿಂದ ಜನರು ಬರುವುದರಿಂದ ಜಾಸ್ತಿ ಟ್ರಾಫಿಕ್ ಇರುತ್ತದೆ. ಅದಕ್ಕೆ ಅನುಗುಣವಾಗಿ ಹಣವನ್ನು ಒದಗಿಸಲಾಗುತ್ತದೆಂದು ಹೇಳುತ್ತೇನೆ.

Female population in the State

189: SRI P.N. REDDY (Malur) and SRI J.M. REDDY (Mulbagal)—Will the Minister of State for Women and Children Welfare be pleased to state.—

(a) the number of female population in the State (District wise particulars to be furnished);

(b) the number of Children who are below 5 years of age in Karnataka (District-wise particulars to be furnished);

(c) the action taken by Government for the welfare of the persons mentioned in clauses (a) & (b) above?

Smt. MANORAMA MADHAVARAJ (Minister of State for Women & Children Welfare).—

(a) Please see vide statemont enclosed (Statement I)

(b) The information relating to children (below 5 years) is not ready in the Department of Director of Census Operation, Bangalore. It is informed that it may take long time to tabulate the information collected by 1981 census authorities. However the information relating to children (below 4 years) has been obtained from the said department and Statement II is enclosed.

(c) The work for welfare of the Women and Children has been under taken by Government as shown below.-

(1) Under special Nutrition Programme as per the guidelines of the letter No. 3/5/70 NS dated 16-3-1971 from the Ministry of Education and Social Welfare (Department of Social Welfare) New Delhi Milk and Bread are being supplied to Expectant and Nursing Mothers and Children below the age of 6 years.

(2) Under I.C.D.S. Scheme: Package of service are being provided to children of 0-6 years, Expectant and Nursing Mothers in the age group of 15-44 years as shown below.—

(i) Supplementary Nutrition
(ii) Immunisation
(iii) Health Check-up and Referral Services
(iv) Pre-school Education
(v) Functional Literacy for Adult Women

3 Social and moral Hygienic programme

(i) Implementation of S.I.T. Act, 1956 for protection, Education Training and Rehabilitation of Women coming under the preview of the Act.

(ii) Running Protective Homes, State Homes, Reception centres besides recognising such agencies in the Voluntary sector who are dedicated to the cause of women and are rendering service for their upliftment.

4 Implementation of Karnataka Children Act, 1961

Under this programme, Remand Houses and Certified Schools are functioning throughout the State besides quite a few Institutions run by the Voluntary Organisations are recognised as fit Person Institutions

5 physically Handicapped

Maintenance Allowance is paid at Rs. 40 p.m.

(6) Bal Bhavan Activities

STATEMENT-I

District State			Females
1			2
KARNATKA@		...	18,173,957
1	Bangalore	...	2,353,280
2	Belgaum	...	1,456,000
3	Bellary	...	733,153
4	Bidar	...	489,046
5	Bijapur	...	1,189,612
6	Chickmagalur	...	443,388
7	Chitradurga	...	861,035
8	Dakshina Kannada*	...	1,221,252
9	Dharwad**	...	1,431,727
10	Gulbarga	...	1,028,320
11	Hassan	...	671,793
12	Kodagu***	...	222,971
13	Kolar	...	935,631
14	Mandya	...	692,720
15	Mysore	...	1,260,296
16	Raichur	...	884,691
17	Shimoga	...	806,486
18	Tumkur	...	968,305
19	Uttara Kannada@@	...	524,211

@Formerly known as Mysore
*Formerly known as South Kanara
**Formerly known as Dharwar
***Formerly known as Coorg
@@Formerly known as North Kanara
Spellings of the Dists. are as adopted by Survey of India.

STATEMENT-II

Name of the State/ District	Total Population	Population in Age group 0-4 years
1	2	3
Karnataka State ...	2,92,99,014	42,21,763
Districts :		
Bangalore ...	33,65,515	5,55,404
Belgaum ...	24,23,342	3,58,335
Bidar ...	8,24,059	1,35,713
Bellary ...	11,22,686	1,60,152
Bijapur ...	19,85,591	2,97,964
Chickmagalur ...	7,36,647	1,04,170
Chitradurga ...	13,97,456	1,96,976
Dharwar ...	23,42,213	3,43,100
Gulbarga ...	17,39,229	2,77,108
Hassan ...	11,02,370	1,59,492
Kolar ...	15,16,646	2,05,834
Mandya ...	11,54,374	1,69,621
Mysore ...	20,77,238	2,85,559
North Kanara ...	8,49,103	1,19,764
Raichur ...	14,15,740	2,16,021
Shimoga ...	13,01,485	1,92,900
South Kanara ...	19,39,315	2,74,996
Tumkur ...	16,27,721	2,20,212
Coorg ...	3,78,291	5,0442

All Ages (Total) in Karnataka State	...	2,92,99,014
0-4 Years in Bangalore	...	42,21,762
	...	33,65,515

ಶ್ರೀ ಪಿ. ಎನ್. ರೆಡ್ಡಿ.—ಮಾನ್ಯ ಮಂತ್ರಿಗಳು ಅನೇಕ ಸಲಹೆಗಳನ್ನು ಒದಗಿಸಿಕೊಟ್ಟಿದ್ದಾರೆ. ಆದರೆ ಮುಖ್ಯವಾಗಿ ಸ್ತ್ರೀಯರಿಗೆ ಅಭ್ಯುದಯಕ್ಕೆ ಮತ್ತು ಅವರ ಆರೋಗ್ಯದೃಷ್ಟಿಯಿಂದ ಎಲ್ಲ ಮಹಿಳಾ ಮಂಡಲಿಗಳಲ್ಲಿ ಕುಟುಂಬ ಯೋಜನೆಯ ಬಗ್ಗೆ ತೆಗೆದುಕೊಂಡ ಕಾರ್ಯಕ್ರಮದ ಬಗ್ಗೆ ಪ್ರಚಾರ ಮಾಡಿಲ್ಲ. ಇದರ ಬಗ್ಗೆ ಏನಾದರೂ ಆಜ್ಞೆ ಮಾಡಿದ್ದೀರಾ ? ಎರಡನೆಯದಾಗಿ ನಿಮ್ಮ ಅಂಕಿಅಂಶಗಳ ಪ್ರಕಾರ ಏಳು ಎಂಟು ಲಕ್ಷ ರೂಪಾಯಿಗಳನ್ನು ಕೊಟ್ಟರೂ ಅದರಲ್ಲಿ ಅರ್ಧದಷ್ಟು ಹಣವನ್ನು ಖರ್ಚುಮಾಡಿಲ್ಲ. ಕರ್ನಾಟಕದಲ್ಲಿ ಸ್ತ್ರೀಯರ ಸಂಖ್ಯೆ ಬಹಳ ಇದೆ. ಆದ್ದರಿಂದ ತಾಲ್ಲೂಕು ಬೋರ್ಡ್‌ಗಳಿಗೂ, ಶಾಸನ ಸಭೆಗಳಿಗೂ ಪಂಚಾಯತಿಗಳಿಗೂ ಅರ್ಧದಷ್ಟು ಪ್ರಾತಿನಿಧ್ಯವನ್ನು ಕೊಡಲು ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ ಕುಟುಂಬ ಕಲ್ಯಾಣ ಯೋಜನೆಯು ಆರೋಗ್ಯ ಇಲಾಖೆಗೆ ಸಂಬಂಧಪಟ್ಟಿರುತ್ತದೆ. ಈ ಬಗ್ಗೆ ಅವರು ಸಾಕಷ್ಟು ಕೆಲಸ ಮಾಡಿರುತ್ತಾರೆ. ಇನ್ನು ಮಾನ್ಯ ಸದಸ್ಯರು ಹೇಳಿದಹಾಗೆ ಸ್ತ್ರೀಯರಿಗೆ ಪ್ರಾತಿನಿಧ್ಯ ಕೊಡುವಬಗ್ಗೆ ಹೇಳುವುದಾದರೆ ತಾಲ್ಲೂಕುಬೋರ್ಡ್, ಪಂಚಾಯಿತಿ, ಮತ್ತು ಶಾಸನಸಭೆಗಳಲ್ಲಿ ಹೆಂಗಸರಿಗೆ ವಿಶೇಷಲಾತಿ ಅಂದರೆ ರಿಸರ್ವೇಷನ್ ಇಡುವ ಬಗ್ಗೆ ಪುರುಷರು ದೊಡ್ಡ ಮನಸ್ಸು ಮಾಡಿದರೆ ಇದು ಖಂಡಿತವಾಗಿಯೂ ಸಾಧ್ಯ ವೆಂದು ಹೇಳುತ್ತೇನೆ.

ಶ್ರೀ ಜೆ. ಎಂ. ರೆಡ್ಡಿ.—ನಮ್ಮ ಪ್ರಶ್ನೆಗೆ ಸರಿಯಾದ ಉತ್ತರ ಸಿಕ್ಕಿಲ್ಲ. ಕರ್ನಾಟಕ ರಾಜ್ಯದಲ್ಲಿ ಸ್ತ್ರೀಯರ ಸಂಖ್ಯೆ ಎಷ್ಟು ಎಂದು ಪ್ರಶ್ನೆ ಕೇಳಿದ್ದೇನೆ. ನನ್ನ ಪ್ರಶ್ನೆಗೆ ಸರಿಯಾದ ಉತ್ತರವಿಲ್ಲ. ನಮ್ಮ ರಾಜ್ಯದಲ್ಲಿ ಮಹಿಳಾ ಸಮಾಜ, ಬಾಲವಾಡಿಗಳು ಎಷ್ಟು ಕೆಲಸ ಮಾಡುತ್ತಿವೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀಮತಿ ಮನೋರಮ ಮಧ್ವರಾಜ್.—ಬಾಲವಾಡಿಗಳನ್ನು ಸಮಾಜ ಕಲ್ಯಾಣ ಇಲಾಖೆ, ವಿದ್ಯಾ ಇಲಾಖೆ ಮತ್ತು ನಮ್ಮ ಇಲಾಖೆ ಮೂರು ಇಲಾಖೆಗಳು ಸೇರಿ ಕೆಲಸ ಮಾಡುವುದರಿಂದ ಸಧ್ಯಕ್ಕೆ ನನ್ನಲ್ಲಿ ಮಾಹಿತಿ ಇಲ್ಲ. ಸದಸ್ಯರಿಗೆ ಮಾಹಿತಿ ಬೇಕಾದರೆ ಒದಗಿಸಿಕೊಡುತ್ತೇನೆ.

ಶ್ರೀ ಎಸ್. ಎಂ. ಶೀರ್ನಳ್ಳಿ ಚಂದ್ರಶೇಖರ್.—ಮಾನ್ಯ ಮಂತ್ರಿಗಳು ೨ನೆಯ ಪ್ರಶ್ನೆಗೆ ಉತ್ತರ ಕೊಡುತ್ತಾ :

(೧) ಹೆಚ್ಚಿನ ಪೌಷ್ಟಿಕ ಆಹಾರ
(೨) ಸೊಂಕು ತಟ್ಟದಿರುವಂತೆ ಚುಚ್ಚು ಮದ್ದು ಹಾಕುವುದು
(೩) ಆರೋಗ್ಯ ಪರೀಕ್ಷೆ ಹಾಗೂ ಮೇಲಿನ ಆಸ್ಪತ್ರೆಗಳಿಗೆ ವರ್ಗಾಯಿಸುವುದು.
(೪) ಉಚಿತ ಶಾಲಾ ಪೂರ್ವ ಶಿಕ್ಷಣ
(೫) ವಯಸ್ಕ ಮಹಿಳೆಯರಿಗೆ ಔಪಚಾರಿಕ ಅಕ್ಷರಭ್ಯಾಸ

ಈ ರೀತಿ ಹೇಳಿದ್ದೀರಿ, ಎಲ್ಲಿ ಇವುಗಳನ್ನು ಒದಗಿಸಿಕೊಡುತ್ತಿದ್ದೀರಿ, ಯಾವ ಊರಿನಲ್ಲಿ ಕೊಡುತ್ತೀರಿ ಎಂಬುದನ್ನು ತಿಳಿಸುತ್ತೀರಾ ?.

ಶ್ರೀಮತಿ ಮನೋರಮ ಮಧ್ವರಾಜ್.—ವಿವರಗಳು ಬೇಕಾದರೆ ಓದಿ ಹೇಳುತ್ತೇನೆ.

ಅಧ್ಯಕ್ಷರು.—೨೦ ಜಿಲ್ಲೆಗಳ, ೧೭೫ ತಾಲ್ಲೂಕುಗಳ ವಿವರ ಒಂದೇ ನಿಮಿಷದಲ್ಲಿ ಬಂದು ಬಿಡುತ್ತದೆಯೇ ? ಮಂತ್ರಿಗಳು ರಾಜ್ಯದ ವಿವರ ಇದ್ದರೆ ಒದಗಿಸಿ.

ಶ್ರೀಮತಿ ಮನೋರಮ ಮಧ್ವರಾಜ್.—ಪೌಷ್ಟಿಕ ಆಹಾರವನ್ನು ಒದಗಿಸಿರುವ ಸ್ಥಳಗಳು. ಬೀದರ್ ಜಿಲ್ಲೆಯ ಹುಮ್ನಾಬಾದ್, ಬಸವಕಲ್ಯಾಣ. ಗುಲ್ಬರ್ಗ ಜಿಲ್ಲೆಯ ಯಾದಗಿರಿ ಶಹಾಪುರ. ರಾಯಚೂರು, ದೇವದುರ್ಗ, ಗೋಕಾಕ್ ನಿಪ್ಪಾಣಿ, ರಾಮದುರ್ಗ. ಹುಬ್ಬಳ್ಳಿ, ಧಾರವಾಡ ಹಾವೇರಿ, ರಾಣೆಬೆನ್ನೂರು, ಗದಗ, ಬೆಟಗೇರಿ, ಹಾಸಗಲ್ ಹೀಗೆ ಇನ್ನು ಮುಂತಾದ ಸ್ಥಳಗಳಲ್ಲಿ ಈ ಯೋಜನೆ ಜಾರಿಯಲ್ಲಿದೆ.

ಶ್ರೀ ಎಸ್. ಎಂ. ಶೀರಾಳ್ಳಿ ಚಂದ್ರಶೇಖರ್.—ವಿತರಣೆ ಮಾಡತಕ್ಕವರು ಯಾರು ? ಡಿಪಾರ್ಟ್‌ಮೆಂಟ್‌ನವರು ಮಾಡುತ್ತಾರೆಯೆ ?.

ಶ್ರೀಮತಿ ಮನೋರಮ ಮಧ್ವರಾಜ್.—ಮುನಿಸಿಪಾಲಿಟಿ ವಿರಿಯಾದಲ್ಲಿ ಮುನಿಸಿಪಾಲಿಟಿಯವರು ಮಾಡುತ್ತಾರೆ.

ಶ್ರೀ ಬಿ.ಪಿ.ಡಿ. ಸಾಲಪ್ಪ.—(೪) ಪ್ರಶ್ನೆಯಲ್ಲಿ ಕರ್ನಾಟಕದಲ್ಲಿ ೫ ವರ್ಷಕ್ಕಿಂತಲು ಕಡಿಮೆ ವಯಸ್ಸಿನ ಮಕ್ಕಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ, ಉತ್ತರ ಹೇಳಿದ್ದಾರೆ ಬೆಂಗಳೂರಿನ ಜನಗಣತಿ ನಿರ್ದೇಶಕರ ಇಲಾಖೆಯಲ್ಲಿ ಮಕ್ಕಳಿಗೆ ಸಂಬಂಧಿಸಿದ ಮಾಹಿತಿ ಇನ್ನೂ ಸಿದ್ಧವಾಗಿಲ್ಲ. ೧೯೮೧ನೇ ಜನಗಣತಿ ಅಧಿಕಾರಿಗಳೆಷ್ಟರ ಅಂಕಿಅಂಶಗಳ ಮಾಹಿತಿಗೆ ಇನ್ನೂ ಬಹಳ ಕಾಲ ತೆಗೆದುಕೊಳ್ಳುತ್ತದೆಂದು ತಿಳಿಸಿದ್ದಾರೆ.

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಕಂಪ್ಯೂಟರ್ ಸೌಲಭ್ಯ ಇತರೆ ಸೌಲಭ್ಯ ಸೌಕರ್ಯಗಳಿರುವಾಗ ಅವರಿಗೆ ಮಕ್ಕಳ ಜನಗಣತಿ ಕೊಡಲಿಕ್ಕೆ ಸಾಧ್ಯವಾಗಿಲ್ಲವೆಂದರೆ ಏನು ? ಏತಕ್ಕೆ ತಡವಾಯಿತು ಮಂತ್ರೊಮ್ಮೆ ಅವರನ್ನು ಕೇಳುತ್ತೀರಾ ? ಬೇಗ ಜನಗಣತಿ ಕಾರ್ಯವನ್ನು ಮುಗಿಸುತ್ತೀರಾ ?.

ಶ್ರೀಮತಿ ಮನೋರಮ ಮಧ್ವರಾಜ್.—ಆದಷ್ಟು ಶೀಘ್ರ ಒದಗಿಸಲಾಗುತ್ತದೆ.

Strength of Class I and II officers working in the Women and Childrens' Welfare Department

219 SMT. MOTAMMA (Mudigere). – Will the Minister of State for Women & Childrens Welfare be pleased to state :—

(a) the number of class I and Class II Officers in the Women and Childrens' Welfare Department ;

(b) out of them, the number of Scheduled Castes and Scheduled Tribes ;

(c) are there Scheduled Castes and Scheduled Tribes as per 18% reservation, if not, action taken by the Government ?

SMT. MANORAMA MADHWARAJ (Minister of State for Women and Childrens' Welfare). –

(a) Total number of Senior Scale Class I Officers-2 (working on Officiating capacity) out of them, Scheduled Castes-1, Scheduled Tribes-Nil.

(b) Total number of Junior Scale Class I Officers-6, out of them Scheduled Castes-NIL, Scheduled Tribes-NIL.

(c) Total number of Class II Officers-65, out of them,

Number of Officers in regular service	37
Number of Officets on Officiating Capacity	28
Out of them number of Scheduled Castes (24.64%)	16
Scheduled Tribes	NIL

ಶ್ರೀಮತಿ ಸುಶೀಲ ಚೆಲುವರಾಜ್ (ಶ್ರೀಮತಿ ಮೋಟಮ್ಮನವರ ಪರವಾಗಿ).—ಮಹಿಳೆಯರು ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿರುವ ಒಂದನೇ ಮತ್ತು ಎರಡನೇ ದರ್ಜೆಯ ಅಧಿಕಾರಿಗಳ ಸಂಖ್ಯೆ ಎಷ್ಟು ? ಅದರಲ್ಲಿ ಹರಿಜನ-ಗಿರಿಜನರ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಉತ್ತರವಾಗಿ ಒಂದನೇ ದರ್ಜೆ ಹಿರಿಯ ವೇತನ ಶ್ರೇಣಿಯ ಅಧಿಕಾರಿಗಳ ಒಟ್ಟು ಸಂಖ್ಯೆ ೨. ಇವರಲ್ಲಿ ಹರಿಜನರು ಒಬ್ಬರು ಎಂದು, ಗಿರಿಜನರು ಇಲ್ಲವೆಂದು ಹೇಳಿದ್ದಾರೆ ಇದಕ್ಕೆ ಕಾರಣವೇನು ?.

ಶ್ರೀಮತಿ ಮನೋರಮ ಮಧ್ವರಾಜ್.—ಲೋಕ ಸೇವಾ ಆಯೋಗಕ್ಕೆ ಭರ್ತಿಮಾಡಬೇಕೆಂದು ಬರೆದು ಕಳುಹಿಸಿದ್ದೇವೆ. ಲೋಕಸೇವಾ ಆಯೋಗದಿಂದ ನಮಗೆ ಯಾವುದೇ ಉತ್ತರ ಬಂದಿಲ್ಲ. ಆದ್ದರಿಂದ ಆ ಜಾಗವನ್ನು ತುಂಬಲಿಕ್ಕೆ ಸಾಧ್ಯವಾಗಿಲ್ಲ.

ಶ್ರೀಮತಿ ಸುಶೀಲ ಚೆಲುವರಾಜ್.—ತಮ್ಮ ಇಲಾಖೆಯಲ್ಲಿ ೨೯ಕಡ ೧೮ ರಷ್ಟನ್ನು ತುಂಬಲು ವಿಳಂಬವಾಗಿರುವುದಕ್ಕೆ ಕಾರಣವೇನು ? ಆ ಹುದ್ದೆಗಳಿಗೇನಾದರೂ ಜಾಹೀರಾತು ಮಾಡಿದ್ದೀರಾ, ಹಾಗೆ ಮಾಡಿದ್ದರೆ ಎಷ್ಟು ಅರ್ಜಿಗಳು ಬಂದಿವೆ ?